**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 27/2023**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿ ಡಬ್ಲ್ಯೂ.01**

**ದಿನಾಂಕಃ 21.03.2025**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ನನ್ನ ಟೈಲರಿಂಗ್ ಅಂಗಡಿ ಸಿಟಿ ಟೈಲರ್, ಟೆಂಪಲ್ ರಸ್ತೆ, ಹರಿಹರ ದಲ್ಲಿ ಇದೆ. ನನ್ನ ಪ್ರತಿದಿನದ ಆದಾಯದ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಯನ್ನು ಸಲ್ಲಿಸಿಲ್ಲ. ಆರೋಪಿಗೆ ನೀಡಿದ 5 ಲಕ್ಷ ರೂ ನನ್ನ ಮನೆಯಲ್ಲಿ ಇತ್ತು. ಆರೋಪಿಗೆ 5 ಲಕ್ಷ ರೂಗಳನ್ನು 500/ ರೂ. ಮುಖಬೆಲೆಯ ನೋಟುಗಳನ್ನು ನೀಡಿರುತ್ತೇನೆ. ನಾನು ಮಹಾರಾಷ್ಟ್ರ ಬ್ಯಾಂಕ್ ನಲ್ಲಿ ಖಾತೆ ಹೊಂದಿದ್ದೇನೆ. ಅದನ್ನು ಈಗ ಬಂದ್ ಮಾಡಿಸಿರುತ್ತೇನೆ. ಪ್ರಸ್ತುತ ಕರ್ನಾಟಕ ಮತ್ತು ಉಜ್ಜೀವನ್ ಬ್ಯಾಂಕ್ ನಲ್ಲಿ ಖಾತೆ ಹೊಂದಿದ್ದೇನೆ. ಸದರಿ 5 ಲಕ್ಷ ರೂಗಳು ನಾನು ಕೆಲಸ ಮಾಡಿ ಕೂಡಿ ಇಟ್ಟ ಹಣ. ಈ ಬಗ್ಗೆ ದಾಖಲೆಯನ್ನು ಸಲ್ಲಿಸಿಲ್ಲ ಎಂದರೆ ಸಾಕ್ಷಿಯು ಅದು ನಾನು ಕೂಡಿ ಇಟ್ಟ ಹಣ ಎಂದು ನುಡಿಯುತ್ತಾರೆ. ಯೂಸುಫ್ ಖಾನ್ ರವರ ಸಾಕ್ಷ್ಯ ಮಾಡಿಸಲು ತೊಂದರೆ ಇಲ್ಲ ಎಂದರೆ ಸರಿ. ಆರೋಪಿಗೆ ಯಾವ ನಿಬಂಧನೆ ಮೇಲೆ ಹಣ ನೀಡಿರುತ್ತೀರಾ ಎಂದರೆ ಸಾಕ್ಷಿಯು 3 ತಿಂಗಳೊಳಗಾಗಿ ಹಣ ಮರುಪಾವತಿ ಮಾಡುವುದಾಗಿ ಒಪ್ಪಿಕೊಂಡಿದ್ದರಿಂದ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿಯ ಮಾವ ಯೂಸುಪ ಖಾನ ರವರು ಹಣ ಕೇಳಲು ಬಂದ ನಿರ್ದಿಷ್ಟ ದಿನಾಂಕ ತಿಂಗಳು ನನಗೆ ನೆನಪಿಲ್ಲ. ಸಾಮಾನ್ಯವಾಗಿ ನಾನು ನನ್ನ ಗ್ರಾಹಕರಿಗೆ ನನ್ನ ಟೈಲರಿಂಗ್ ಅಂಗಡಿಯಿಂದ ರಶೀದಿಯನ್ನು ಕೊಡುತ್ತೇನೆ ಎಂದರೆ ಸರಿ. ಪ್ರಸ್ತುತ ವ್ಯವಹಾರದಲ್ಲಿ ಯಾವುದೇ ಬರವಣಿಗೆ ಮಾಡಿಕೊಳ್ಳದೇ ಇಷ್ಟೊಂದು ಹಣ ನೀಡಲು ಸಾಧ್ಯವಿಲ್ಲ ಎಂದರೆ ಸಾಕ್ಷಿಯು ಸ್ನೇಹದ ಆಧಾರದ ಮೇಲೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿ ಯಾರಿಂದ ಸೈಟನ್ನು ಖರೀದಿಸಲು ಹಣ ಪಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿ ಪ್ರಶಾಂತ ನಗರದಲ್ಲಿ ಸೈಟ್ ಖರೀದಿಸುವುದಾಗಿ ಹೇಳಿ ಹಣ ಪಡೆದಿದ್ದರು. ನಿಖರವಾದ ಸೈಟ್ ನಂಬರ್ ಚೆಕ್ ಬಂದಿ ನನಗೆ ಗೊತ್ತಿಲ್ಲ. ಆರೋಪಿ ಸೈಟನ್ನು ಖರೀದಿಸಿದ ಬಗ್ಗೆ ನಾನು ಯಾವುದೇ ದಾಖಲೆಯನ್ನು ನೋಡಿಲ್ಲ. ಆರೋಪಿ ಸೈಟನ್ನು ಎಷ್ಟು ಮೊತ್ತಕ್ಕೆ ಖರೀದಿ ಮಾಡಿರುತ್ತಾರೆ ಎಂದು ನಾನು ವಿಚಾರಿಸಿಲ್ಲ. ಆರೋಪಿ ತಮ್ಮ ಸ್ವಂತ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ಹೆಂಡತಿ ಮಕ್ಕಳ ಬಗ್ಗೆ ನನಗೆ ಗೊತ್ತಿಲ್ಲ. ಆದರೆ ಅವರ ತಮ್ಮ ಮತ್ತು ಮಾವನ ಬಗ್ಗೆ ಮಾತ್ರ ಗೊತ್ತು. ಆರೋಪಿ ಸ್ವಂತ ಮನೆಯಲ್ಲಿ ವಾಸವಾಗಿದ್ದಾರೆ ಆದ್ದರಿಂದ ಅವರಿಗೆ ಸೈಟ್ ಖರೀದಿಸುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಪ್ರಸ್ತುತ ಪ್ರಕರಣವನ್ನು ಹೊರತುಪಡಿಸಿ ನ್ಯಾಯಾಲಯದಲ್ಲಿ ಬೇರೆ ಯಾವುದೇ ಪ್ರಕರಣ ದಾಖಲು ಮಾಡಿಲ್ಲ.

ಆರೋಪಿ 2018-19 ನೇ ಸಾಲಿನಲ್ಲಿ 20 ಸಾವಿರ ರೂ ಹಣ ಸಾಲ ಪಡೆದಿದ್ದು ಅದನ್ನು ಪ್ರತಿ ತಿಂಗಳು ಫೋನ್ ಪೇ ಮುಖಾಂತರ ಹಣವನ್ನು ಮರುಪಾವತಿಸುತ್ತಾ ಬಂದಿದ್ದಾರೆ ಎಂದರೆ ಸರಿಯಲ್ಲ. ಸಂಪೂರ್ಣ

ಸಾಲ ತಿರುವಳಿ ಆದ ನಂತರ ಆರೋಪಿ ಭದ್ರತೆಗಾಗಿ ನೀಡಿದ ಚೆಕನ್ನು ದುರುಪಯೋಗ ಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಆರೋಪಿ ನನಗೆ ಭದ್ರತೆಗಾಗಿ ಏನು ನೀಡಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಮತ್ತು ಆರೋಪಿ ಮಾವ ಯೂಸುಫ್ ಖಾನ್ ರವರ ನಡುವೆ ಸಂಬಂದ ಸರಿ ಇಲ್ಲ ಎಂದರೆ ಸಾಕ್ಷಿಯು ಅವರ ಒಡನಾಟ ಚೆನ್ನಾಗಿ ಇದೆ ಎಂದು ನುಡಿಯುತ್ತಾರೆ. ನಾನು ಯೂಸುಫ್ ಖಾನ್ ರವರೊಂದಿಗೆ ಮಿಲಾಪೆಯಾಗಿ ಪ್ರಸ್ತುತ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಿಮ್ಮ ಪಿರ್ಯಾದಿಯಲ್ಲಿ ಆರೋಪಿ ಕುಟುಂಬದ ಅವಶ್ಯಕತೆಗೆ ಹಣ ಪಡೆದಿದ್ದರು ಎಂದು ಹೇಳಿದು ಯಾವ ಅವಶ್ಯಕತೆ ಎಂದರೆ ಸಾಕ್ಷಿಯು ಸೈಟ್ ಖರೀದಿಸಲು ಹಣ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಆರೋಪಿಗೆ ನೀಡಿದ ನೋಟಿಸ್ ಜಾರಿಯಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ವಕೀಲರಿಗೆ ಗೊತ್ತು ಎಂದು ನುಡಿಯುತ್ತಾರೆ. ಆರೋಪಿಯಿಂದ ಕಾನೂನು ಬದ್ದವಾಗಿ ಯಾವುದೇ ಹಣ ಬರುವುದು ಬಾಕಿ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ